**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ:ಡಿಟಿಇ/33/ಟಿಬಿಎಸ್(ವಯೋ.ನಿ)/2022 /616

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001,
**ದಿನಾಂಕ:26.08.2022.**

**-ಅತೀ ಜರೂರು-**

**ಸುತ್ತೋಲೆ**

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಡಿಯಲ್ಲಿ ಕಾಯನಿರ್ವಹಿಸುತ್ತಿರುವ **ಅನುದಾನಿತ ಇಂಜಿನಿಯರಿಂಗ್/ ಪಾಲಿಟೆಕ್ನಿಕ್** ಸಂಸ್ಥೆಗಳಲ್ಲಿ **ದಿನಾಂಕ:31.01.2022 ರಿಂದ ದಿನಾಂಕ:31.03.2023**ರ ಅವಧಿಯಲ್ಲಿ ನಿವೃತ್ತಿ ಹೊಂದಿರುವ/ ಹೊಂದಲಿರುವ ಅಧಿಕಾರಿ/ ನೌಕರರುಗಳ ವಿವರಗಳನ್ನು ಸಲ್ಲಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ **ಅನುದಾನಿತ ಇಂಜಿನಿಯರಿಂಗ್/ಪಾಲಿಟೆಕ್ನಿಕ್** ಸಂಸ್ಥೆಗಳಲ್ಲಿ **ದಿನಾಂಕ:31.01.2022 ರಿಂದ ದಿನಾಂಕ:31.03.2023**ರ ಅವಧಿಯಲ್ಲಿ **ನಿವೃತ್ತಿ ಹೊಂದಿರುವ/ ಹೊಂದಲಿರುವ** ಅಧಿಕಾರಿ/ ನೌಕರರುಗಳ ವಿವರಗಳನ್ನು ಸಲ್ಲಿಸಲು ಆಯಾಯ ಸಂಸ್ಥೆಗಳ ಪ್ರಾಚಾರ್ಯರ ಇ-ಮೇಲ್ ಐಡಿಗೆ **ಗೂಗಲ್ ಫಾರ್ಮ್** ಅನ್ನು ಕಳುಹಿಸಲಾಗಿದೆ. ಅಧಿಕಾರಿ/ ನೌಕರರುಗಳ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಯಾವುದೇ ಕಾರಣಕ್ಕೂ ಕಾಲ ವಿಳಂಬಕ್ಕೆ ಆಸ್ಪದ ಕೊಡದೆ **ದಿನಾಂಕ: 07.09.2022 ರ ಸಂಜೆ 5.00 PM.** ರೊಳಗಾಗಿ ಭರ್ತಿ ಮಾಡಿ ಸಲ್ಲಿಸಲು ತಿಳಿಸಿದೆ. ತಪ್ಪು ಮಾಹಿತಿಯನ್ನು ಸಲ್ಲಿಸಿದ್ದಲ್ಲಿ ಮುಂದಿನ ಹಾಗು ಹೋಗುಗಳಿಗೆ ಸಂಸ್ಥೆಯ ಪ್ರಾಚಾರ್ಯರುಗಳೇ ನೇರ ಹೊಣೆಗಾರರಾಗುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

ಅನುಬಂಧ 03 ರಲ್ಲಿ ಕೋರಲಾದ ಮಾಹಿತಿಯ ಸಮರ್ಥನೀಯ ದಾಖಲೆಗಳನ್ನು ಪ್ರಾಚಾರ್ಯರು ದೃಢೀಕರಿಸಿ ಆಯುಕ್ತಾಯಕ್ಕೆ ತಪ್ಪದೇ ಸಲ್ಲಿಸುವುದು.

ನಿರ್ದೇಶಕರು 26/08/2022

**ಇವರಿಗೆ:**

ಪ್ರಾಂಶುಪಾಲರು, ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳು ಇವರಿಗೆ ಮಾಹಿತಿಗಾಗಿ ಇಲಾಖಾ ವೆಬ್ ಸೈಟ್‌ಮುಖಾಂತರ.